RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| ಭಾಗ-III | ಬೆಂಗಳೂರು, ಸೋಮವಾರ, ಡಿಸೆಂಬರ್ ೧೮, ೨೦೧೭ (ಮಾರ್ಗಶಿರ ೨೭, ಶಕ ವರ್ಷ ೧೯೩೯) | ನಂ. ೧೨೫೭ |
|---|---|---|
| Part-III | Bengaluru, Monday, December 18, 2017 (Margashira 27, Shaka Varsha 1939) | No. 1257 |



**ಕಾರ್ಮಿಕ ಇಲಾಖೆ**

ಕಾರ್ಮಿಕ ಆಯುಕ್ತರವರ ಕಛೇರಿ, "ಕಾರ್ಮಿಕ ಭವನ", ಬೆಂಗಳೂರು, ದಿನಾಂಕ: 7-12-2017

**ತಿದ್ದುಪಡಿ ಆದೇಶ**

**ಸಂಖ್ಯೆ : ಜಿಜೆಡ್‌ಟಿ/ಸಿಆರ್-15/2017-18, ದಿನಾಂಕ: 07.12.2017**

**ವಿಷಯ:-** ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ರ ಪ್ರಕರಣದಲ್ಲಿ ನೀಡಲಾದ ದಿನಾಂಕ : 09.02.2017 ರ ತೀರ್ಪಿನನ್ವಯ ಕಾರ್ಮಿಕ ಇಲಾಖೆಯ "ಕಾರ್ಮಿಕ ಅಧಿಕಾರಿಗಳ" ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

**ಉಲ್ಲೇಖ:**

1. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011ರ ಪ್ರಕರಣದಲ್ಲಿ ನೀಡಲಾದ ದಿನಾಂಕ : 09.02.2017 ರ ತೀರ್ಪು.
2. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-1), ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ ಸಿಆಸುಇ 182 ಸೇನೆನಿ 2011 ದಿನಾಂಕ : 06.05.2017.
3. ಕಾರ್ಮಿಕ ಆಯುಕ್ತರ ಕಛೇರಿಯ ಆದೇಶ ಸಂಖ್ಯೆ: ಜಿಜೆಡ್‌ಟಿ/ಸಿಆರ್-15/ 2017-18,ದಿನಾಂಕ: 09.10.2017.
4. ಕರ್ನಾಟಕ ರಾಜ್ಯಪತ್ರ, ವಿಶೇಷ ರಾಜ್ಯಪತ್ರಿಕೆಯಲ್ಲಿ ಕಾರ್ಮಿಕ ಅಧಿಕಾರಿಗಳ ವೃಂದದ ತಾತ್ಕಾಲಿಕಾ ಜೇಷ್ಠತಾ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಲಾದ ದಿನಾಂಕ : 16.10.2017.
5. ಕಛೇರಿ ಆದೇಶ ಸಂ:ಜಿಜೆಡ್‌ಟಿ/ಸಿಆರ್-15/2017-18, ದಿನಾಂಕ : 30.11.2017.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಉಲ್ಲೇಖ (1)ರ ತೀರ್ಪಿನನ್ವಯ ಸರ್ಕಾರವು ಉಲ್ಲೇಖ (2)ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಇಲಾಖೆಯ ವಿವಿಧ ವೃಂದಗಳ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ, ಉಲ್ಲೇಖ (3)ರಲ್ಲಿ **"ಕಾರ್ಮಿಕ ಅಧಿಕಾರಿ"** ವೃಂದದ ತಾತ್ಕಾಲಿಕಾ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (4)ರ ಮೂಲಕ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ನಂತರ ಉಲ್ಲೇಖ (5) ರಲ್ಲಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು.

ಉಲ್ಲೇಖ (1) ಮತ್ತು (2) ರನ್ವಯ ಹಿರಿಯ ಕಾರ್ಮಿಕ ನಿರೀಕ್ಷಕರ ಜೇಷ್ಠತ ಪಟ್ಟಿಯನ್ನೂ ಸಹ ಪರಿಷ್ಕರಿಸಲಾಗಿದ್ದು, ಸದರಿ ವೃಂದವು ಕಾರ್ಮಿಕ ಅಧಿಕಾರಿಗಳ ಫೀಡರ್ ಕೇಡರ್ ಆಗಿರುತ್ತದೆ. ಕ್ರಮ ಸಂಖ್ಯೆ : 200, 238 ಹಾಗೂ 256 ರಲ್ಲಿರುವ ನೌಕರರು ಹೈದರಾಬಾದ್-ಕರ್ನಾಟಕ ಪ್ರಾಂತ್ಯದವರಾಗಿದ್ದು, ಭಾರತ ಸಂವಿಧಾನದ ಪರಿಚ್ಛೇದ 371 (ಜೆ) ರಡಿ ರೂಪಿಸಲಾದ 2013ರ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಾವಳಿಯನ್ವಯ ಪ್ರತ್ಯೇಕ ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿರುತ್ತದೆ.

ಕಾರ್ಮಿಕ ಅಧಿಕಾರಿ ವೃಂದದ ಜೇಷ್ಠತಾಪಟ್ಟಿಯ ಅನುಬಂಧ-2 ರಲ್ಲಿರುವ ಕ್ರಮ ಸಂಖ್ಯೆ : 148 ರಲ್ಲಿರುವ ಶ್ರೀ ಶೇಖರಪ್ಪ ಗಡದ್ (ಎಸ್.ಸಿ) ಇವರು ಫೀಡರ್ ಕೇಡರ್ ನಲ್ಲಿ ಕ್ರಮ ಸಂಖ್ಯೆ : 256 ರಲ್ಲಿದ್ದು, ಇವರು ಕ್ರಮ ಸಂಖ್ಯೆ : 140 ರಲ್ಲಿರುವ ಶ್ರೀ ಹರಿ (ಫೀಡರ್ ಕ್ರಮ ಸಂಖ್ಯೆ: 200) ಹಾಗೂ ಕ್ರಮ ಸಂಖ್ಯೆ : 150 ರಲ್ಲಿರುವ ಶ್ರೀ ಶ್ಯಾಮರಾವ್ (ಫೀಡರ್ ಕ್ರಮ ಸಂಖ್ಯೆ: 258) ಇವರುಗಳಿಗಿಂತ ಜೇಷ್ಠತೆಯಲ್ಲಿ ಕಿರಿಯರಾಗಿರುವುದರಿಂದ ಉಲ್ಲೇಖ (5)ರಲ್ಲಿ ಪ್ರಕಟಿಸಲಾದ ಕಾರ್ಮಿಕ ಅಧಿಕಾರಿ ವೃಂದದ ಜೇಷ್ಠತಾ ಪಟ್ಟಿಯ ಅನುಬಂಧ-2 ರಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಹೊರಡಿಸಲಾಗಿದೆ.

1. ಕ್ರಮ ಸಂಖ್ಯೆ : 148 ರಲ್ಲಿರುವ ಶ್ರೀ ಶೇಖರಪ್ಪ ಗಡದ್ (ಎಸ್.ಸಿ.) ಇವರನ್ನು ಕ್ರಮ ಸಂಖ್ಯೆ : 150 ಎಂದು ಓದಿಕೊಳ್ಳುವುದು.
2. ಕ್ರಮ ಸಂಖ್ಯೆ : 149 ರಲ್ಲಿರುವ ಶ್ರೀ ಹರಿ ಇವರನ್ನು ಕ್ರಮ ಸಂಖ್ಯೆ : 148 ಎಂದು ಓದಿಕೊಳ್ಳುವುದು.
3. ಕ್ರಮ ಸಂಖ್ಯೆ : 150 ರಲ್ಲಿರುವ ಶ್ರೀ ಶ್ಯಾಮರಾವ್ ಇವರನ್ನು ಕ್ರಮ ಸಂಖ್ಯೆ : 149 ಎಂದು ಓದಿಕೊಳ್ಳುವುದು.

ಕಾರ್ಮಿಕ ಆಯುಕ್ತರ ಪರವಾಗಿ
ಅಪರ ಕಾರ್ಮಿಕ ಆಯುಕ್ತರು
(ಆಡಳಿತ ಮತ್ತು ಲೆಕ್ಕಪತ್ರ)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 100